ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು –560 010
ಫೋನ್ : 23407011 ರಿಂದ 25 ಫ್ಯಾಕ್ಸ್ : 91-080-23143566 / 23389070
ಇ–ಮೇಲ್ : kssidcho@karnataka.gov.in ವೆಬ್‌ಸೈಟ್ : www.kssidc.co.in

ಸಂಖ್ಯೆ:ಸಮನ್ವಯ:ಎಸ್‌ಸಿಪಿ–ಟಿಎಸ್‌ಪಿ:ಮಳಿಗೆ:ಹಂಚಿಕೆ:ಪ್ರಕಟಣೆ:2023 ದಿನಾಂಕ:**17-02-2023**

## ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಪ್ರವರ್ಗದವರಿಗೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ನಿರ್ಮಿಸಿದ ಕೈಗಾರಿಕಾ ಮಳಿಗೆಗಳ ಹಂಚಿಕೆಗಾಗಿ ಪ್ರಕಟಣೆ

ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಪ್ರವರ್ಗದವರಿಗೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ನಿರ್ಮಿಸಿದ 'ಸಿ' ಮತ್ತು 'ಡಿ' ಮಾದರಿಯ ಕೈಗಾರಿಕಾ ಮಳಿಗೆಗಳನ್ನು ಯಥಾಸ್ಥಿತಿಯಲ್ಲಿ ಹಂಚಿಕೆ ಮಾಡಲು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಸಕ್ತ ಭಾವಿ ಉದ್ದಿಮೆದಾರರಿಂದ ಮಾತ್ರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

| ಜಿಲ್ಲೆ ಮತ್ತು ಕೈಗಾರಿಕಾ ವಸಾಹತು ಹೆಸರು | ಮಳಿಗೆ ಸಂಖ್ಯೆ | ಪ್ರವರ್ಗ | ವಿಸ್ತೀರ್ಣ ಚ.ಮೀ.ಗಳಲ್ಲಿ | ಮಳಿಗೆ ತಾತ್ಕಾಲಿಕ ದರ/ ಮಳಿಗೆ ಮೌಲ್ಯ (ರೂ.ಗಳಲ್ಲಿ) | ಅರ್ಜಿ ಜೊತೆ ಪಾವತಿಸಬೇಕಾದ ಇಎಂಡಿ/ಭದ್ರತಾ ಠೇವಣಿ ಶೇ.5 ರಂತೆ (ರೂ.ಗಳಲ್ಲಿ) |
|---|---|---|---|---|---|
| 1 | 2 | 3 | 4 | 5 | 6 |
| **ಬೆಂಗಳೂರು ನಗರ ಜಿಲ್ಲೆ** | | | | | |
| ಮುತ್ತುಗದಹಳ್ಳಿ | ಡಿ–16 | ಪ.ಪಂ., ಮಹಿಳೆ | 300 | 49,28,900 | 2,46,655 |
| **ಮಂಡ್ಯ ಜಿಲ್ಲೆ** | | | | | |
| ನಾಗಮಂಗಲ | ಡಿ–14 | ಪ.ಜಾ., ಮಹಿಳೆ | 267.75 | 23,54,090 | 1,17,705 |
| | ಡಿ–13 | ಪ.ಜಾ | 213.18 | 21,90,380 | 1,09,519 |
| | ಸಿ–23 | ಪ.ಜಾ | 389.12 | 33,50,744 | 1,67,537 |
| | ಸಿ–22 | ಪ.ಜಾ | 422.07 | 34,49,594 | 1,72,480 |
| **ಶಿವಮೊಗ್ಗ ಜಿಲ್ಲೆ** | | | | | |
| ಹಿರೇಶಕುನ–ಸೊರಬ | ಡಿ–104 | ಪ.ಜಾ., ಮಹಿಳೆ | 300.00 | 23,79,000 | 1,18,950 |
| ಹಿರೇಶಕುನ–ಸೊರಬ | ಡಿ–105 | ಪ.ಜಾ | 300.00 | 23,79,000 | 1,18,950 |
| **ಚಿತ್ರದುರ್ಗ ಜಿಲ್ಲೆ** | | | | | |
| ಖುದಾಪುರ | ಡಿ–122 | ಪ.ಜಾ | 300.00 | 21,12,000 | 1,05,600 |
| | ಡಿ–124 | ಪ.ಜಾ., ಮಹಿಳೆ | 300.00 | 21,12,000 | 1,05,600 |
| | ಡಿ–125 | ಪ.ಜಾ | 300.00 | 21,12,000 | 1,05600 |
| ಉಳ್ಳಾರ್ಥಿಕಾವಲು | ಸಿ–38 | ಪ.ಜಾ | 500.00 | 30,19,200 | 1,50,960 |
| | ಸಿ–189 | ಪ.ಜಾ | 500.00 | 30,19,200 | 1,50,960 |
| | ಡಿ–45 | ಪ.ಜಾ | 300.00 | 19,21,100 | 96,055 |
| | ಡಿ–204 | ಪ.ಜಾ., ಮಹಿಳೆ | 300.00 | 19,21,100 | 96,055 |
| | ಡಿ–207 | ಪ.ಜಾ | 300.00 | 19,21,100 | 96,055 |
| **ಚಿಕ್ಕಬಳ್ಳಾಪುರ ಜಿಲ್ಲೆ** | | | | | |
| ಕಡಮಲಕುಂಟೆ | ಡಿ-115 | ಪ.ಜಾ | 300.00 | 25,30,268 | 1,26,513 |
| | ಡಿ-131 | ಪ.ಜಾ., ಮಹಿಳೆ | 300.00 | 25,30,268 | 1,26,513 |
| | ಸಿ-78 | ಪ.ಜಾ | 500.00 | 42,96,857 | 2,14,843 |

| ಜಿಲ್ಲೆ ಮತ್ತು ಕೈಗಾರಿಕಾ ವಸಾಹತು ಹೆಸರು | ಮಳಿಗೆ ಸಂಖ್ಯೆ | ಪ್ರವರ್ಗ | ವಿಸ್ತೀರ್ಣ ಚ.ಮೀ.ಗಳಲ್ಲಿ | ಮಳಿಗೆ ತಾತ್ಕಾಲಿಕ ದರ/ ಮಳಿಗೆ ಮೌಲ್ಯ (ರೂ.ಗಳಲ್ಲಿ) | ಅರ್ಜಿ ಜೊತೆ ಪಾವತಿಸಬೇಕಾದ ಇಎಂಡಿ/ಭದ್ರತಾ ಠೇವಣಿ ಶೇ.5 ರಂತೆ (ರೂ.ಗಳಲ್ಲಿ) |
|---|---|---|---|---|---|
| ತುಮಕೂರು ಜಿಲ್ಲೆ | | | | | |
| ಕಡಮಲಕುಂಟೆ-ಪಾವಗಡ | D type shed No.C-7 | ಪ.ಜಾ | 300 | 17,08,674 | 85,434 |
| ಧಾರವಾಡ ಜಿಲ್ಲೆ | | | | | |
| ಗಾಮನಗಟ್ಟಿ | C-10 | ಪ.ಜಾ | 321.62 | 56,41,097 | 2,82,055 |
| | C-11 | ಪ.ಜಾ., ಮಹಿಳೆ | 313.87 | 56,41,097 | 2,82,055 |
| | C-12 | ಪ.ಪಂ. | 372.00 | 56,41,097 | 2,82,055 |
| | C-13 | ಪ.ಜಾ | 372.00 | 56,41,097 | 2,82,055 |
| | C-14 | ಪ.ಜಾ | 372.00 | 56,41,097 | 2,82,055 |
| | C-15 | ಪ.ಪಂ., | 372.00 | 56,41,097 | 2,82,055 |
| | C-16 | ಪ.ಜಾ., ಮಹಿಳೆ | 372.00 | 56,41,097 | 2,82,055 |
| | C-17 | ಪ.ಜಾ | 372.00 | 56,41,097 | 2,82,055 |
| | C-18 | ಪ.ಪಂ., ಮಹಿಳೆ | 372.00 | 56,41,097 | 2,82,055 |
| | C-19 | ಪ.ಜಾ | 372.00 | 56,41,097 | 2,82,055 |
| | C-20 | ಪ.ಜಾ., ಮಹಿಳೆ | 372.00 | 56,41,097 | 2,82,055 |
| | D-11 | ಪ.ಜಾ | 212.40 | 36,07,284 | 1,80,364 |
| | D-12 | ಪ.ಜಾ | 208.80 | 36,07,284 | 1,80,364 |
| | D-13 | ಪ.ಪಂ., | 214.20 | 36,07,284 | 1,80,364 |
| | D-14 | ಪ.ಜಾ., ಮಹಿಳೆ | 205.20 | 36,07,284 | 1,80,364 |
| | D-15 | ಪ.ಜಾ | 205.20 | 36,07,284 | 1,80,364 |
| | D-16 | ಪ.ಜಾ | 216.00 | 36,07,284 | 1,80,364 |
| | D-17 | ಪ.ಪಂ., ಮಹಿಳೆ | 212.40 | 36,07,284 | 1,80,364 |
| | D-18 | ಪ.ಜಾ., ಮಹಿಳೆ | 199.52 | 36,07,284 | 1,80,364 |
| | D-19 | ಪ.ಜಾ | 194.88 | 36,07,284 | 1,80,364 |
| | D-20 | ಪ.ಜಾ | 216.00 | 3607,284 | 1,80,364 |
| ಬೆಳಗಾವಿ ಜಿಲ್ಲೆ | | | | | |
| ಜಮಖಂಡಿ | C-1 | ಪ.ಜಾ | 352.80 | 43,53,300 | 2,17,665 |
| | C-2 | ಪ.ಜಾ., ಮಹಿಳೆ | 352.80 | 43,53,300 | 2,17,665 |
| | C-3 | ಪ.ಪಂ | 352.80 | 42,70,000 | 2,13,500 |
| | C-4 | ಪ.ಜಾ | 352.80 | 42,70,000 | 2,13,500 |
| | D-7 | ಪ.ಜಾ | 192.50 | 26,02,100 | 1,30,105 |
| | D-8 | ಪ.ಪಂ., ಮಹಿಳೆ | 192.50 | 26,02,100 | 1,30,105 |
| | D-9 | ಪ.ಜಾ., ಮಹಿಳೆ | 192.50 | 26,02,100 | 1,30,105 |
| | D-10 | ಪ.ಜಾ | 192.50 | 26,02,100 | 1,30,105 |
| | D-11 | ಪ.ಪಂ | 192.50 | 26,02,100 | 1,30,105 |
| | D-12 | ಪ.ಜಾ | 192.50 | 26,02,100 | 1,30,105 |
| ಬೋರಗಾಂವ್ | D-2 | ಪ.ಪಂ | 276.00 | 29,99,200 | 1,49,960 |
| | D-3 | ಪ.ಪಂ., ಮಹಿಳೆ | 276.00 | 29,99,200 | 1,49,960 |
| | C-3 | ಪ.ಜಾ | 414.00 | 40,05,220 | 2,00,261 |
| ಕಲಬುರಗಿ ಜಿಲ್ಲೆ | | | | | |
| ಚಿಂಚೋಳಿ | D-1 | ಪ.ಜಾ | 211.80 | 23,93,887 | 1,19,695 |
| | D-2 | ಪ.ಜಾ., ಮಹಿಳೆ | 211.80 | 23,93,887 | 1,19,695 |
| | D-3 | ಪ.ಜಾ | 211.80 | 23,93,887 | 1,19,695 |

| ಜಿಲ್ಲೆ ಮತ್ತು ಕೈಗಾರಿಕಾ ವಸಾಹತು ಹೆಸರು | ಮಳಿಗೆ ಸಂಖ್ಯೆ | ಪ್ರವರ್ಗ | ವಿಸ್ತೀರ್ಣ ಚ.ಮೀ.ಗಳಲ್ಲಿ | ಮಳಿಗೆ ತಾತ್ಕಾಲಿಕ ದರ/ ಮಳಿಗೆ ಮೌಲ್ಯ (ರೂ.ಗಳಲ್ಲಿ) | ಅರ್ಜಿ ಜೊತೆ ಪಾವತಿಸಬೇಕಾದ ಇಎಂಡಿ/ಭದ್ರತಾ ಠೇವಣಿ ಶೇ.5 ರಂತೆ (ರೂ.ಗಳಲ್ಲಿ) |
|---|---|---|---|---|---|
| ಬಳ್ಳಾರಿ ಜಿಲ್ಲೆ | | | | | |
| ಹರಗಿನದೋಣಿ | C-1 | ಪ.ಜಾ | 479.00 | 45,60,447 | 2,28,022 |
| | C-2 | ಪ.ಜಾ., ಮಹಿಳೆ | 449.00 | 44,49,447 | 2,22,472 |
| | C-3 | ಪ.ಜಾ | 443.00 | 44,27,247 | 2,21,362 |
| | C-4 | ಪ.ಪಂ | 432.00 | 43,86,547 | 2,19,327 |
| | C-5 | ಪ.ಪಂ., ಮಹಿಳೆ | 432.50 | 43,88,397 | 2,19,420 |
| | c-6 | ಪ.ಜಾ | 441.00 | 44,19,847 | 2,20,992 |
| | C-7 | ಪ.ಜಾ., ಮಹಿಳೆ | 460.00 | 44,90,147 | 2,24,507 |
| | C-8 | ಪ.ಜಾ | 476.50 | 45,51,197 | 2,27,560 |
| | C-9 | ಪ.ಪಂ | 484.00 | 45,78,947 | 2,28,947 |
| | D-1 | ಪ.ಜಾ., ಮಹಿಳೆ | 491.70 | 36,39,229 | 1,81,961 |
| | D-2 | ಪ.ಪಂ | 462.30 | 35,30,449 | 1,76,522 |
| | D-3 | ಪ.ಜಾ | 438.30 | 34,41,649 | 1,72,082 |
| | D-4 | ಪ.ಪಂ., ಮಹಿಳೆ | 406.50 | 33,23,989 | 1,66,199 |
| | D-5 | ಪ.ಜಾ | 371.70 | 31,95,229 | 1,59,761 |
| | D-6 | ಪ.ಪಂ | 330.90 | 30,44,269 | 1,52,213 |

E&OE

ನಿಗದಿತ ಅರ್ಜಿ ನಮೂನೆಗಳನ್ನು ನಿಗಮದ ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವಿವಿಧ ಸ್ಥಳಗಳಲ್ಲಿ ಇರುವ ಮಳಿಗೆಗಳ ವಿವರಗಳಾದ ವಿಸ್ತೀರ್ಣ, ತಾತ್ಕಾಲಿಕ ಮೌಲ್ಯ, ಮುಂಗಡ ಠೇವಣಿ ಮೊಬಲಗು, ಪರಿಶೀಲನಾ ಶುಲ್ಕ, ಪ್ರವರ್ಗ, ಹಂಚಿಕೆಯ ಷರತ್ತು ಮತ್ತು ನಿಬಂಧನೆಗಳು ಹಾಗೂ ಇತರೆ ಸಮಗ್ರ ವಿವರಗಳನ್ನು ಸಂಬಂಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕೈ.ವ) / ವ್ಯವಸ್ಥಾಪಕರು(ಕೈವ) (ಮೊಬೈಲ್ ಸಂಖ್ಯೆಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದೆ) ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸಮನ್ವಯ), ಮೊಬೈಲ್ ಸಂಖ್ಯೆ 8884415800 ರವರಿಂದ ಪಡೆಯಬಹುದಾಗಿರುತ್ತದೆ ಹಾಗೂ ಸದರಿ ವಿವರಗಳನ್ನು ನಿಗಮದ ವಬ್‌ಸೈಟ್ www.kssidc.co.in ನಲ್ಲಿಯೂ ವೀಕ್ಷಿಸಬಹುದಾಗಿರುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು ಅರ್ಜಿ ಶುಲ್ಕ, ಮುಂಗಡ ಠೇವಣಿ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ: **22-03-2023** ಸಾಯಂಕಾಲ 5-00_ ಗಂಟೆಯವರೆವಿಗೆ ಸಂಬಂಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) / ವ್ಯವಸ್ಥಾಪಕರು(ಕೈವ), ವಿಭಾಗೀಯ/ಶಾಖಾ ಕಛೇರಿಗಳಲ್ಲಿ ಸಲ್ಲಿಸಬಹುದಾಗಿದೆ.

ವ್ಯವಸ್ಥಾಪಕ ನಿರ್ದೇಶಕರು 14/2

## ನಿಯಮ ಹಾಗೂ ನಿಬಂಧನೆಗಳು:

ಅ. ಮಳಿಗೆಗಳನ್ನು "ಹೇಗಿದೆಯೋ ಹಾಗೆ" (As is where is basis) 10 ವರ್ಷಗಳ ಗುತ್ತಿಗೆ ಕರಾರು ಆಧಾರದಲ್ಲಿ ಹಂಚಿಕೆ ಮಾಡಲಾಗುತ್ತದೆ.

i) ನಿಗದಿತ ಅರ್ಜಿ ನಮೂನೆಯನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ವೆಬ್‌ಸೈಟ್ **www.kssidc.co.in** ನಿಂದ ಡೌನ್‌ಲೋಡ್ ಮಾಡಿಕೊಂಡು ದ್ವಿಪ್ರತಿಯಲ್ಲಿ ಸಲ್ಲಿಸುವುದು.

ii) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ರೂ. 2,500 (ತೆರಿಗೆ ಸೇರಿದಂತೆ) ಅರ್ಜಿ ಶುಲ್ಕವಾಗಿ ಮತ್ತು ರೂ. 1,180 ಪರಿಶೀಲನಾ ಶುಲ್ಕವಾಗಿ (ತೆರಿಗೆ ಸೇರಿದಂತೆ) ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು

iii) ಮುಂಗಡ ಠೇವಣಿ ಮೊತ್ತವನ್ನು ಪ್ರಕಟಣೆಯಲ್ಲಿ ತೋರಿಸಿರುವ ಮೊತ್ತಕ್ಕೆ ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು..

iv) ಮೇಲ್ಕಂಡಂತೆ ಎರಡು ಡಿ.ಡಿ.ಗಳಲ್ಲಿ ಒಂದನ್ನು ಮುಂಗಡ ಠೇವಣಿಗಾಗಿ ಹಾಗೂ ಮತ್ತೊಂದನ್ನು ಅರ್ಜಿ ಶುಲ್ಕ ಮತ್ತು ಪರಿಶೀಲನಾ ಶುಲ್ಕ ಎರಡನ್ನು ಸೇರಿಸಿ ಅರ್ಜಿಯೊಂದಿಗೆ ಯಾವ ಕೈಗಾರಿಕಾ ವಸಾಹತುವಿನ ಮಳಿಗೆಗಳ ಹಂಚಿಕೆ ಕೋರಿ ಸಲ್ಲಿಸಲ್ಪಡುವುದೋ, ಅಲ್ಲಿಗೆ ಹಣ ಸಂದಾಯವಾಗುವಂತೆ ಕೆ.ಎಸ್.ಎಸ್.ಐ.ಡಿ.ಸಿ ಲಿಮಿಟೆಡ್, ವಿಭಾಗೀಯ /ಶಾಖಾ ಕಛೇರಿಯ ಹೆಸರಿಗೆ ಡಿ.ಡಿ. ಯನ್ನು ಸಲ್ಲಿಸುವುದು.

v) ಮಳಿಗೆ ಹಂಚಿಕೆಯಾಗದಿದ್ದಲ್ಲಿ ಇ.ಎಂ.ಡಿ./ಮುಂಗಡ ಠೇವಣಿ ಬಡ್ಡಿ ರಹಿತವಾಗಿ ಮರು-ಪಾವತಿಯಾಗುವುದು ಮತ್ತು ಹಂಚಿಕೆಯಾದಲ್ಲಿ, ನಿವೇಶನ/ಮಳಿಗೆ ಮೌಲ್ಯಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

vi) ನಿಗಮದಿಂದ ಹಂಚಿಕೆ ಮಾಡಲ್ಪಡುವ ಮಳಿಗೆಗಳ ಹಂಚಿಕೆ ಸಮಯದಲ್ಲಿಯೇ ಮಳಿಗೆ ಮೌಲ್ಯಕ್ಕೆ ಶೇಕಡ 90%ರಷ್ಟು, ನಿವೇಶನಗಳ ಮೌಲ್ಯಕ್ಕೆ ಶೇಕಡ 75%ರಷ್ಟು ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಉಳಿದ ಮೌಲ್ಯವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ವಾರ್ಷಿಕ ಶೇಕಡಾ 12.5ರ ಬಡ್ಡಿ ದರದೊಂದಿಗೆ ಪಾವತಿಸಲು ಅವಕಾಶವಿರುತ್ತದೆ. ಮುಂದುವರೆದು, ಪಾಲುದಾರಿಕೆ/ಕಂಪನಿ ಘಟಕವಾಗಿದ್ದಲ್ಲಿ ಎಲ್ಲಾ ಪಾಲುದಾರರು/ನಿರ್ದೇಶಕರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವಾಗಿರಬೇಕು.

vii) ಹಂಚಿಕೆಯನ್ನು ಪಡೆದು, ಮೌಲ್ಯವನ್ನು ನಿಗಧಿತ ಸಮಯದಲ್ಲಿ ಪಾವತಿಸಿ, ಸ್ವಾಧೀನ ತೆಗೆದುಕೊಳ್ಳಲು ವಿಫಲರಾದಲ್ಲಿ, ನಿಗಮದ ಮಳಿಗೆಗಳ ಹಂಚಿಕೆ ನಿಯಮಗಳ ಅನ್ವಯ ಮುಂಗಡ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

viii) ಮಳಿಗೆಯ ಹಂಚಿಕೆಯು 10 ವರ್ಷಗಳ ಗುತ್ತಿಗೆ ಕರಾರು ಅವದಿಯ ಆಧಾರದ ಮೇಲೆ ಇರುತ್ತದೆ. ಈ ಮೇಲೆ ತಿಳಿಸಿರುವ ಮಳಿಗೆ ಮೌಲ್ಯ ಹಾಗೂ ಇತರೆ ವೆಚ್ಚಗಳು ತಾತ್ಕಾಲಿಕವಾಗಿದ್ದು, ಕೈಗಾರಿಕಾ ವಸಾಹತುಗಳ ಅಭಿವೃದ್ಧಿ ಕಾರ್ಯಗಳು ಸಂಪೂರ್ಣ ಮುಗಿಯುವವರೆಗಿನ ನಿಬಂಧನೆಗೆ ಒಳಪಟ್ಟು ಹೆಚ್ಚು ಅಥವಾ ಕಡಿಮೆ ಅಗಬಹುದಾಗಿರುತ್ತದೆ. ಅಭಿವೃದ್ಧಿ ವೆಚ್ಚ ಹಾಗೂ ಇತರೆ ವೆಚ್ಚಗಳು ಪರಿಷ್ಕೃತಗೊಂಡಲ್ಲಿ/ನಿಖರ ಅಳತೆಗಳಿಗೆ ಅನುಗುಣವಾಗಿ ಸದರಿ ಹೆಚ್ಚುವರಿ ಮೊತ್ತವನ್ನು ತಿಳಿಸುವ ದಿನಾಂಕದಿಂದ 30 ದಿನಗಳೊಳಗಾಗಿ ಪಾವತಿಸತಕ್ಕದ್ದು.

ix) ನಿಗಮವು ಕಾಲಕಾಲಕ್ಕೆ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.

x) ಅರ್ಜಿ ಸಲ್ಲಿಸುವ ಮೊದಲು ಕೈಗಾರಿಕಾ ವಸಾಹತುವಿಗೆ ಭೇಟಿ ನೀಡಿ, ಸ್ಥಳ ಪರಿಶೀಲಿಸಿ ಮಳಿಗೆಯನ್ನು ಪರಿಶೀಲಿಸಿ ಯಥಾಸ್ಥಿತಿಯಲ್ಲಿ ಪಡೆಯುವ ಬಗ್ಗೆ ಒಪ್ಪಿಗೆಯನ್ನು ಪ್ರಮಾಣದ ಪತ್ರವನ್ನು ಅರ್ಜಿಯ ಜೊತೆಯಲ್ಲಿ ಕಡ್ಡಾಯವಾಗಿ ಸಲ್ಲಿಸುವುದು.

xi) ನಿಗಮವು ಅರ್ಜಿ ಜೊತೆ ಪಡೆದಿರುವ ಮುಂಗಡ ಠೇವಣಿ ಮೊತ್ತದ ಮೇಲೆ ಯಾವುದೇ ಬಡ್ಡಿಯನ್ನು ನೀಡುವುದಿಲ್ಲ.

xii) ಯಾವುದೇ ಮಳಿಗೆ ಹಂಚಿಕೆ ಮಾಡದಿರುವ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ / ಮರು ಪ್ರಕಟಣೆಗೆ ಹೊರಡಿಸುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿರುತ್ತದೆ.

xiii) ಆಯಾ ಕೈಗಾರಿಕಾ ವಸಾಹತುಗಳಲ್ಲಿ ಒದಗಿಸಿರುವ ವಿದ್ಯುತ್ ಸಂಪರ್ಕ ಮಾರ್ಗ ಶುಲ್ಕವನ್ನು ಹಂಚಿಕೆದಾರರು ಪಾವತಿಸಬೇಕಾಗುತ್ತದೆ.

xiv) ಅರ್ಜಿದಾರರು ಅರ್ಜಿಯಲ್ಲಿ ನಮೂದಿಸಿದ ವಿದ್ಯುತ್ ಸಂಪರ್ಕ ಬೇಡಿಕೆಗೆ ಸಂಬಂಧ ಅರ್ಜಿಯಲ್ಲಿ ನಮೂದಿಸಿರುವ ನಿರ್ದಿಷ್ಟ ವಿದ್ಯುತ್ ಬೇಡಿಕೆಗೆ (ಹೆಚ್.ಪಿ.)ಗೆ ನಿಗದಿಪಡಿಸುವ ಮೌಲ್ಯ ಪಾವತಿಮಾಡಬೇಕಾಗಿರುತ್ತದೆ. ಹಂಚಿಕೆ ಆದ ನಂತರ ಅರ್ಜಿಯಲ್ಲಿ ನಮೂದಿಸಿರುವ ಬೇಡಿಕೆ ವಿದ್ಯುತ್‌ಗಿಂತ ಕಡಿಮೆ ವಿದ್ಯುತ್ ಬೇಡಿಕೆ ಕುರಿತು ಮನವಿಯನ್ನು ಪರಿಗಣಿಸಲಾಗುವುದಿಲ್ಲ.

xv) ಮಳಿಗೆಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಹಂಚಿಕೆಯಾಗದಿದ್ದಲ್ಲಿ, ಹಂಚಿಕೆ ಪ್ರಕ್ರಿಯೆ ಮುಗಿದ ನಂತರ ಮತ್ತು ಅರ್ಜಿಯನ್ನು ಹಿಂಪಡೆಯುವ ಅರ್ಜಿದಾರರಿಗೆ ಮುಂಗಡ ಠೇವಣಿ ಮೊತ್ತವನ್ನು ಮಾತ್ರ ಹಿಂದಿರುಗಿಸಲಾಗುವುದು. ಮುಂದುವರೆದು ಅರ್ಜಿಯ ಜೊತೆಯಲ್ಲಿ ಪಾವತಿಸಿರುವ ಅರ್ಜಿ ಶುಲ್ಕ ಮತ್ತು ಪರಿಶೀಲನಾ ಶುಲ್ಕ ಹಿಂದಿರುಗಿಸುವುದಿಲ್ಲ.

xvi) ಮಳಿಗೆಗಳ ಸ್ವಾಧೀನವನ್ನು ಹಂಚಿಕೆದಾರರಿಗೆ ನೀಡಿದ ನಂತರ ಮಳಿಗೆಯಲ್ಲಿ ಅವಶ್ಯಕತೆ ಇರುವ ಇತರೆ ಸೌಕರ್ಯಗಳನ್ನು ಫಲಾನುಭವಿಗಳೆ ಖುದ್ದಾಗಿ ಮಾಡಿಕೊಳ್ಳತಕ್ಕದ್ದು.

xvii) ಸದರಿ ಪ್ರಕಟಣೆಗೆ ಎದುರಾಗಿ ಒಂದು ಕುಟುಂಬಕ್ಕೆ ಒಂದು ಮಳಿಗೆ ಮಾತ್ರ ಹಂಚಿಕೆ ಮಾಡಲಾಗುವುದು

xviii) ಹಂಚಿಕೆದಾದ ಮಳಿಗೆಗಳ ಮೌಲ್ಯವನ್ನು ಹಂಚಿಕೆ ಪತ್ರ ವಿತರಿಸಿದ ೯೦ ದಿನಗಳ ಕಾಲಾವಕಾಶದಲ್ಲಿ ಪಾವತಿಸತಕ್ಕದ್ದು

**ಈ. ಅರ್ಜಿದಾರರು ಅರ್ಜಿ ಜೊತೆಗೆ ಈ ಕೆಳಕಂಡ ಪೂರಕ ದಾಖಲೆಗಳನ್ನು ಸಲ್ಲಿಸುವುದು.**

1) ಸಣ್ಣ ಕೈಗಾರಿಕಾ ನೋಂದಣಿ ಪತ್ರ (ಉದ್ಯೋಗ ಆಧಾರ್) ಪತ್ರವನ್ನು ಸಲ್ಲಿಸುವುದು.
೨) ಅರ್ಜಿದಾರರ/ಪಾಲುದಾರರ/ನಿರ್ದೇಶಕರ ವಿದ್ಯಾರ್ಹತೆಯ ಪ್ರಮಾಣ ಪತ್ರ
೩) ಸಕ್ಷಮ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ಸಲ್ಲಿಸುವುದು.
4) ಅರ್ಜಿದಾರರ ಭಾವಚಿತ್ರ(2 ಸಂಖ್ಯೆ)
5) ಸಂವಿಧಾನ ಪಾಲುದಾರಿಕೆ/ಖಾಸಗಿ ನಿಯಮಿತ/ಸಾರ್ವಜನಿಕ ನಿಯಮಿತ ಅದಲ್ಲಿ ಸಂಬಂಧಪಟ್ಟ ದೃಢೀಕೃತ ದಾಖಲೆಗಳನ್ನು ಸಲ್ಲಿಸುವುದು.
6) ಉದ್ದೇಶಿತ ಕೈಗಾರಿಕೆಯ ವಿವರವಾದ ಯೋಜನಾ ವರದಿ (ಯೋಜನಾ ವರದಿಯಲ್ಲಿ ಸಲ್ಲಿಸಬೇಕಾದ ವಿವರಗಳನ್ನು ನಿಗಮದ ಹಂಚಿಕೆಗಾಗಿ ಸಲ್ಲಿಸುವ ಅರ್ಜಿಯಲ್ಲಿ ವಿವರವಾಗಿ ವಿವರಿಸಲಾಗಿದೆ).
7) ಅರ್ಜಿದಾರರು ಈಗಾಗಲೇ ಕೈಗಾರಿಕೆ ನಡೆಸುತ್ತಿದ್ದಲ್ಲಿ ಈ ಕುರಿತು ಸಂಬಂಧಿಸಿದ ದಾಖಲಾತಿಗಳು.
8) ಅರ್ಜಿದಾರರು ಸ್ಥಳೀಯರಾಗಿದ್ದು, ಕರ್ನಾಟಕದಲ್ಲಿ 10 ವರ್ಷಕ್ಕಿಂತ ಹೆಚ್ಚು ಅವಧಿ ವಾಸಿಸುತ್ತಿರುವ ಬಗ್ಗೆ ಕಂದಾಯ ಇಲಾಖೆಯಿಂದ ದೃಢೀಕರಣ ಪತ್ರ (Domicile Certificate) ಸಲ್ಲಿಸುವುದು. ಹಾಗೂ ಪಾಲುದಾರಿಕೆ/ಪ್ರೈವೇಟ್ ಲಿಮಿಟೆಡ್ ಕಂಪನಿಯಾದಲ್ಲಿ, ಪಾಲುದಾರರ/ನಿರ್ದೇಶಕರು ಕರ್ನಾಟಕದಲ್ಲಿ ವಾಸಿಸುತ್ತಿರುವ ಪ್ರಮಾಣ ಪತ್ರ ಸಲ್ಲಿಸುವುದು.
9) ಯೋಜನಾ ಬಂಡವಾಳ ಹೂಡಿಕೆಗೆ ಇರುವ ಸಾಮರ್ಥ್ಯವನ್ನು ತೋರಿಸಲು ಬ್ಯಾಂಕಿನಿಂದ/ಹಣಕಾಸು ಸಂಸ್ಥೆಯಿಂದ ಸಾಲ ಮಂಜೂರಾತಿ ಒಪ್ಪಿಗೆ ಪತ್ರ ಅಥವಾ ಠೇವಣಿಗಳನ್ನು ಹೊಂದಿದ್ದಲ್ಲಿ, ಈ ಬಗ್ಗೆ ಬ್ಯಾಂಕಿನ ಪ್ರಮಾಣ ಪತ್ರ. ಹಾಗೂ ಸಾಲವೆನ್ಸಿ ಪ್ರಮಾಣ ಪತ್ರ.
10) ಉದ್ಯೋಗ ಕಲ್ಪಿಸುವ ಸಾಮರ್ಥ್ಯದ ವಿವರ.
11) ಉದ್ದೇಶಿತ ಉತ್ಪಾದನೆಯು ರಫ್ತು ಮಾಡುವ ವಸ್ತು, ಆಮದು ಮಾಡಿಕೊಳ್ಳುವ ವಸ್ತುವಿಗೆ ಪರ್ಯಾಯ ವಸ್ತುವಾಗಿದ್ದಲ್ಲಿ, ಸ್ಥಳೀಯ ಸಂಪನ್ಮೂಲಗಳನ್ನು ಬಳಸುವ ಕೈಗಾರಿಕೆ/ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪರ್ಯಾಯ/ಹೈಟೆಕ್ ಕೈಗಾರಿಕೆಗಳು ಆಗಿದ್ದಲ್ಲಿ, ಅವುಗಳನ್ನು ಸ್ಪಷ್ಟೀಕರಿಸುವ ದಾಖಲೆಗಳು.
12) ಮಾಲಿನ್ಯ ರಹಿತ ವಸ್ತುವಿನ ಉತ್ಪಾದನೆಯಾದಲ್ಲಿ, ಸದರಿ ಉತ್ಪಾದನೆಯನ್ನು ತೋರಿಸುವ ದಾಖಲೆಗಳು.
13) ಅರ್ಜಿದಾರರು ಪ್ರಥಮ ತಲೆಮಾರಿನವರಾಗಿದ್ದಲ್ಲಿ ಸಂಬಂಧಿಸಿದ ದಾಖಲೆಗಳು.
14) ಪ್ರಸ್ತುತ ಯೋಜನೆಯು ಸಿ.ಜಿ.ಟಿ.ಎಂ.ಎಸ್.ಇ.(**CREDIT GUARANTEE FUND TRUST FOR MICRO AND SMALL ENTERPRISES**) ಇವರಿಗೆ ಸಲ್ಲಿಸಿದ್ದಲ್ಲಿ, ಅದರ ವಿವರಗಳು.
15) ರೂ. 100 ಲಕ್ಷಗಳಿಗಿಂತ ಹೆಚ್ಚಿನ ಯೋಜನಾ ಬಂಡವಾಳ ಹೂಡಿಕೆ ಸಾಮರ್ಥ್ಯ ಹೊಂದಿರುವ ಯೋಜನೆ ಆಗಿದ್ದಲ್ಲಿ, ಅದಕ್ಕೆ ಸಂಬಂಧಿಸಿದ ದಾಖಲೆಗಳು.
16) ಅರ್ಜಿದಾರರು Pan Card No, Aadhar Card ಪ್ರತಿಗಳನ್ನು ಮತ್ತು Bank a/c No, Branch Name, Place and IFSC Code, Mobile Number ಗಳನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

ಉ) ಮಳಿಗೆಗಳ ಹಂಚಿಕೆ ವಿಧಾನ:

1) ಫಲಾನುಭವಿಯು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರತಕ್ಕದ್ದು
2) ಫಲಾನುಭವಿಯು ಕೈಗಾರಿಕಾ ಅಥವಾ ಕೈಗಾರಿಕಾ ನೀತಿ 2020-25ರಲ್ಲಿರುವ ಸೇವಾ ಚಟುವಟಿಕೆ ಸ್ಥಾಪಿಸುವುದು.
3) ನಿಗಮವು ಮಳಿಗೆ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸುವುದು, ನಂತರ ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಕೈಕೇ ರವರ ಅಧ್ಯಕ್ಷತೆಯಲ್ಲಿ ಈಗಾಗಲೆ ಇರುವ ಏಕಗವಾಕ್ಷಿ ಉಪ ಸಮಿತಿ ಸಭೆಯಲ್ಲಿ ಅರ್ಜಿಗಳನ್ನು ಪರಾಮರ್ಷಿಸಿ, ಸಂದರ್ಶನದ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.
4) ಆಯ್ಕೆಗೊಂಡ ಫಲಾನುಭವಿಗಳ ಅರ್ಜಿಗಳನ್ನು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಹಂಚಿಕೆಗಾಗಿ ಅನುಮೋದನೆ ಪಡೆದ ನಂತರವೇ ಹಂಚಿಕೆ ಪತ್ರಗಳನ್ನು ನೀಡಲಾಗುವುದು.
5) ಫಲಾನುಭವಿಗಳು ಮಳಿಗೆ ಹಂಚಿಕೆಯಾದ ಎರಡು (02) ವರ್ಷಗಳ ಒಳಗಾಗಿ ಕೈಗಾರಿಕೆ/ಸೇವಾ ಚಟುವಟಿಕೆಯನ್ನು ನಿಯಮಾನುಸರ ಪ್ರಾರಂಭಿಸಬೇಕಾಗಿರುತ್ತದೆ. ಇಲ್ಲವಾದಲ್ಲಿ, ಹಂಚಿಕೆಯನ್ನು ರದ್ದುಗೊಳಿಸಿ ಇತರೇ ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಫಲಾನುಭವಿಗೆ ನಿಯಮಾನುಸಾರ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.
6) ಕೆಎಸ್ಎಸ್ಐಡಿಸಿ ಸಂಸ್ಥೆಯು ಮಳಿಗೆ ಹಂಚಿಕೆಯಾದ ಉದ್ದಿಮೆದಾರರಿಗೆ 10 ವರ್ಷಗಳ ಅವಧಿಗೆ ಲೀಸ್-ಕಂ-ಸೇಲ್ ಡೀಡ್ ಮಾಡಿ, ಫಲಾನುಭವಿಗೆ ಮಳಿಗೆಯನ್ನು ಹಸ್ತಾಂತರಿಸುವುದು. ಸದರಿ ಅವಧಿ ಮುಗಿದ ನಂತರ ಕೈಗಾರಿಕೆಯು ಸದರಿ ಹಂಚಿಕೆಯಾದ ಮಳಿಗೆಯು ಚಾಲನೆಯಲ್ಲಿದ್ದಲ್ಲಿ ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ ಇವರ ಒಪ್ಪಿಗೆ ಪಡೆದು ಶುದ್ಧ ಕ್ರಯಪತ್ರವನ್ನು (Absolute Sale Deed) ನೀಡಲು ಕೆಎಸ್ಎಸ್ಐಡಿಸಿಯು ಕ್ರಮ ವಹಿಸುತ್ತದೆ.

ವ್ಯವಸ್ಥಾಪಕ ನಿರ್ದೇಶಕರು
1/7/2